ನಟ್ಟಾದ ಕ್ರಮ ತೆಗೆದುಕೊಳ್ಳಬೇಕು. ಯಾವುದೇ ಸ್ಪೆಷಲಿಸ್ಟ್‌ಗಳಂತೂ ಮಧ್ಯಾಹ್ನದ ಮೇಲೆ ಇರುವುದೇ ಇಲ್ಲ. ಬಾಗಿಲಲ್ಲಿ ಕ್ಲಾಸ್ ೪ ಸರ್ವೆಂಟ್ ಕೇಳಿತ್ತಿರುತ್ತಾರೆ, ಅವರನ್ನು ಕೇಳಿದರೆ ಡಾಕ್ಟರ್ ಬರುವುದು ಅನುಮಾನ ಇಂತಹ ಕಡೆ ಹೋಗಿ ಸಿಗುತ್ತಾರೆಂದು ಹೇಳುವಂತಹ ಪರಿಸ್ಥಿತಿಗೆ ಬಂದಿದೆ. ಆದ್ದರಿಂದ ದಯಮಾಡಿ ಖಾಸಗಿಯಾಗಿ ಸರಕಾರೀ ವೈದ್ಯರುಗಳು ಸೇವೆ ಏನು ಸಲ್ಲಿಸುತ್ತಾರೆ. ಅದನ್ನು ತಪ್ಪಿಸುವುದಕ್ಕೆ ಒಂದು ಕಟ್ಟುನಿಟ್ಟಾದ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸರಕಾರಕ್ಕೆ ಆಸಕ್ತಿ ಇದೆಯೇ ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ :— ಆತಂಕ ಏನೂ ಇಲ್ಲ. ನಾವೇ ಪರ್ಮಿಷನ್ ಕೊಟ್ಟಿರುವುದರಿಂದ ಬೇರೆ ಕಡೆ ಹೋಗಿ ಪ್ರಾಕ್ಟೀಸ್ ಮಾಡುತ್ತಾರೆ. ಆದೂ ಸಿಟಿಯಲ್ಲಿ ಮಾಡುತ್ತಾರೆ. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿ ಅವರು ಬೇರೆ ಕಡೆ ಹೋಗಿ ಪ್ರಾಕ್ಟೀಸ್ ಮಾಡುವುದಕ್ಕೆ ಖಾಸಗೀ ನರ್ಸಿಂಗ್ ಹೋಂಗಳು ಇರುವುದಿಲ್ಲ. ಆದರೂ ಯಾರಾದರೂ ಹೋಗಿರುವುದು ಕಂಡುಬಂದರೆ ಅಂತಹ ಕೇಸುಗಳು ಇದ್ದರೆ ನನಗೆ ತಾವು ತಿಳಿಸಬೇಕು ಈ ವಿಚಾರದಲ್ಲಿ ನನಗೂ ಸ್ವಲ್ಪ ಮಾಹಿತಿ ಇದೆ, ಇದನ್ನು ನಾನು ಕಟ್ಟುನಿಟ್ಟಾಗಿ ಪರಿಶೀಲನೆ ಮಾಡುತ್ತೇನೆ.

ಅಧ್ಯಕ್ಷರು : ಮಾನ್ಯ ಸದಸ್ಯರಾದ ಶ್ರೀ ಕೆ. ಬಿ. ಕೋಳಿವಾಡ್ ಅವರು ಗೈರುಹಾಜರಿದ್ದಾರೆ. ಈಗ ಸಿಂಧ್ಯಾ ಅವರು ತಮ್ಮ ಪ್ರಶ್ನೆ ಕೇಳಬಹುದು.

ರಾಜ್ಯದಲ್ಲಿನ ಕುಟುಂಬ ಕಲ್ಯಾಣ ಯೋಜನೆ ಬಗ್ಗೆ

೨೩೭. ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೆ ?

(ಅ) ೧೯೯೦–೯೧ನೇ ಸಾಲಿನಲ್ಲಿ ರಾಜ್ಯದಲ್ಲಿ ಕುಟುಂಬ ಕಲ್ಯಾಣ ಕಾರ್ಯಕ್ರಮ ಕುಂಠಿತವಾಗಿರುವುದು ನಿಜವೇ ?

(ಆ) ಹಾಗಿದ್ದಲ್ಲಿ ಯಾವ ಪ್ರಮಾಣದಲ್ಲಿ ಕುಂಠಿತವಾಗಿದೆ ?

(ಇ) ಇದನ್ನು ಸರಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

(ಅ) ಹೌದು.

(ಆ) ೧೯೯೦–೯೧ನೇ ಸಾಲಿನ ಪ್ರಗತಿಯನ್ನು ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದಾಗ ಕಸ್ತ್ರ ಚಿಕಿತ್ಸೆಯಡಿಯಲ್ಲಿ ಶೇ. ೩.೯ ವಂಕಿ ಅಳವಡಿಸುವಲ್ಲಿ ಶೇ. ೦.೯ ಮತ್ತು ನಂಗುವ ಪಾತ್ರೆ ಯಂಡಿಯಲ್ಲಿ ಶೇ. ೪.೨ ಕಡಿಮೆಯಾಗಿದೆ. ನಿರೋಧ್ ಬಳಸುವವರ ಕಾರ್ಯಕ್ರಮದಡಿಯಲ್ಲಿ ಪ್ರಗತಿ ಶೇ. ೦.೮ ರಷ್ಟು ಹೆಚ್ಚಿದೆ. ಜಿಲ್ಲಾವಾರು ವಿವರಗಳ ಪಟ್ಟಿಯನ್ನು ಲಗತ್ತಿಸಲಾಗಿದೆ.

(ಇ) ಈ ಕೆಳಕಂಡಂತೆ ಕ್ರಮ ಕೈಗೊಳ್ಳಲಾಗಿದೆ.

೧. ಪುರುಷ ಸಂತಾನಹರಣ ಶಸ್ತ್ರ ಚಿಕಿತ್ಸೆಗೆ ಒಳಪಡುವವರಿಗೆ ರಾಜ್ಯ ಸರ್ಕಾರದ ವತಿಯಿಂದ ಹೆಚ್ಚುವರಿಯಾಗಿ ರೂ. ೫೦–೦೦ ಪ್ರೋತ್ಸಾಹ ಧನವನ್ನು ಮತ್ತು ಮಹಿಳಾ ಸಂತಾನಹರಣ ಶಸ್ತ್ರಚಿಕಿತ್ಸೆ ಗೊಳಗಾಗುವವರಿಗೆ ಹೆಚ್ಚುವರಿ ರೂ. ೧೦ ಪ್ರೋತ್ಸಾಹ ಧನವನ್ನು ನೀಡಲಾಗುತ್ತಿದೆ.

೨. ಕುಟುಂಬ ಕಲ್ಯಾಣ ಶಸ್ತ್ರ ಚಿಕಿತ್ಸೆಗೆ ಪುನರ್ಮೊಲಿಸುವ ಇಲಾಖೆಯ ಮತ್ತು ಇಲಾಖೇತರ ಸಿಬ್ಬಂದಿಯವರಿಗೆ ಮತ್ತು ಸಾರ್ವಜನಿಕರಿಗೆ ಒಂದು ವರ್ಷದಲ್ಲಿ ಒಟ್ಟು ಕೇಸುಗಳಿಗನುಸಾರವಾಗಿ ಪ್ರತಿ ಕೇಸಿಗೆ ರೂ. ೧೫ ರಿಂದ ೬೦ ರವರೆಗೆ ಪ್ರೇರೇಪಣೆ ಧನವನ್ನು ನೀಡಲಾಗುವುದು.

೩. ಕುಟುಂಬ ಕಲ್ಯಾಣ ಶಸ್ತ್ರಚಿಕಿತ್ಸೆಗೆ ಒಳಪಡುವವರಿಗೆ ಆದ್ಯಪ್ಪ ಚೀಟಿ ನೀಡುವ ಸಲುವಾಗಿ ಪ್ರತಿ ಜಿಲ್ಲೆಗೆ ಪ್ರತಿ ತಿಂಗಳಿಗೆ ರೂ. ೧೦,೦೦೦ ಮೊಬಲಗನ್ನು ನೀಡಲಾಗುತ್ತಿದೆ.

೪. ಎರಡಂ ಮಕ್ಕಳು ಮತ್ತು ಕಡಿಮೆ ಮಕ್ಕಳಿದ್ದು ಕುಟುಂಬ ಕಲ್ಯಾಣ ಶಸ್ತ್ರ ಚಿಕಿತ್ಸೆಗೆ ಒಳಪಡುವ ಸರ್ಕಾರಿ ನೌಕರರಿಗೆ ಒಂದು ವಿಶೇಷ ವೇತನ ಭತ್ಯೆ ನೀಡಲಾಗುತ್ತಿದೆ.

೫. ಪ್ರತಿ ಉಪಕೇಂದ್ರಗಳಿಗೆ ಎರಡು ಸಾವಿರ ರೂ. ಮೌಲ್ಯದ ಔಷಧಿಯನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆ.

೬. ತಾಲ್ಲೂಕು ಮಟ್ಟದ ಸಾರ್ವಜನಿಕ ಆಸ್ಪತ್ರೆಗಳಿಗೆ ನಿರಂತರವಾಗಿ ಶಸ್ತ್ರ ಚಿಕಿತ್ಸೆಯ ಸೇವೆ ಒದಗಿಸುವ ಸಲುವಾಗಿ ಡೀಜಲ್ ಜನರೇಟರ್‌ಗಳನ್ನು ಒದಗಿಸಲಾಗಿದೆ,

೭. ವಿವಿಧ ಹಂತದಲ್ಲಿ ಕುಟುಂಬ ಕಲ್ಯಾಣ ಪ್ರಗತಿಯನ್ನು ನಿಯತಕಾಲಿಕವಾಗಿ ವಿಮರ್ಶಿಸುವ ಸಲುವಾಗಿ ಕುಟುಂಬ ಕಲ್ಯಾಣ ಕ್ರಿಯಾ ಸಮಿತಿಗಳನ್ನು ಪುನರ್ ರಚಿಸಲಾಗಿದೆ.

೮. ಕುಟುಂಬ ಕಲ್ಯಾಣ ಕಾರ್ಯಕ್ರಮ ಅನುಷ್ಠಾನದಲ್ಲಿ ಕ್ರಿಯಾತ್ಮಕ ಪಾತ್ರ ವಹಿಸಲು ಸ್ಥಾನಿಕ ಸಂಸ್ಥೆಗಳು ಸ್ವಯಂ ಸೇವಾ ಸಂಸ್ಥೆಗಳು ಮತ್ತು ಖಾಸಗಿ ಆಸ್ಪತ್ರೆಗಳು ಒಳಗೊಳ್ಳುವಂತೆ ಮಾಡಲಾಗಿದೆ.

Percentage of variation under different methods of Family Welfare Programme during the year 1990–91 (upto end of October 1990)

Sl. No.	District	Method of Family Welfare			
		Sterilisation	I. U. D.	Nirodh Users	O. P. Users
1	2	3	4	5	6
1. (a)	Bangalore City Corporation	+ 1.1	+ 2.0	+ 20.6	+ 6.3
1. (b)	Bangalore (U) PHCs	— 18.3	— 19.9	— 3.5	— 14.6
1. (c)	Bangalore (U) Total	— 5.1	— 3.9	— 11.2	— 1.2
2.	Bangalore (Rural)	— 29.9	— 10.5	+ 5.9	— 15.9
3.	Chitradurga	+ 6.1	— 13.2	— 31.3	— 32.2
4.	Kolar	— 4.6	— 13.3	— 10.3	— 8.5
5.	Shimoga	— 4.1	+ 25.0	+ 17.9	+ 15.9
6.	Tumkur	+ 3.5	— 11.0	— 12.8	— 19.5
	Bangalore Dvn. Total	— 10.3	— 4.6	— 3.7	— 9.7
7.	Belgaum	+ 4.0	+ 9.5	— 2.3	+ 1.0
8.	Bijapur	+ 6.5	+ 32.6	+ 70.0	+ 66.5
9.	Dharwad	+ 8.5	+ 4.3	+ 3.7	— 3.0
10.	Uttara Kannada	+ 8.7	— 0.7	— 18.3	— 16.7
	Belgaum Dvn. Total	— 6.5	+ 13.8	+ 16.0	+ 18.9

1	2	3	4	5	6
11.	Bellary	— 11.5	— 21.1	— 4.6	— 4.2
12.	Bidar	— 24.4	— 2·2	— 12.2	— 19.7
13.	Gulbarga	— 0.4	— 24.3	— 8.0	— 8.2
14.	Raichur	— 12.1	— 18.0	— 14.4	— 20.3
	Gulbarga Dvn. Total	— 11.1	— 17.4	— 9.9	— 13.3
15.	Chickamagalur	— 8.7	— 6.1	— 4.9	— 11.7
16.	D. Kannada	+ 3.8	+ 20.1	+ 18.9	— 1.1
17.	Hassan	+ 0.8	+ 2·2	+ 10.7	+ 3.1
18.	Kodagu	— 22·9	— 13.8	— 11.1	— 13.0
19.	Mandya	— 14.1	— 12.4	+ 8.5	— 2·1
20.	Mysore	+ 4.7	— 5.0	— 14·1	— 17.4
	Mysore Dvn. Total	— 2.0	+ 2.3	+ 0.0	— 9.1
	STATE TOTAL	— 3:9	— 0.9	+ 0.8	— 4.2

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಹೊಸದಾಗಿ ಈ ಖಾತೆಯ ಜವಾಬ್ದಾರಿಯನ್ನು ಹೊತ್ತಿದ್ದಾರೆ. ಅವರಿಗೆ ಸರ್ಕಾರಿ ಅಧಿಕಾರಿಗಳು ಸರಿಯಾದ ಮಾಹಿತಿಯನ್ನು ಕೊಟ್ಟಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಅವರು ಒಂದನ್ನು ಒಪ್ಪಿಕೊಂಡಿದ್ದಾರೆ ಏನೇದರೆ, ೧೯೯೦–೯೧ನೇ ಸಾಲಿನಲ್ಲಿ ರಾಜ್ಯದಲ್ಲಿ ಕುಟುಂಬ ಕಲ್ಯಾಣ ಕಾರ್ಯಕ್ರಮ ಕುಂಠಿತ ವಾಗಿರುವುದು ನಿಜ ಎಂದು ಒಪ್ಪಿಕೊಂಡಿದ್ದಾರೆ. ಆದರೆ ಶೇಕಡಾವಾರು ಪ್ರಮಾಣವನ್ನು ಏನು ಕೊಟ್ಟಿದ್ದಾರೆ. ಇದು ಸತ್ಯಕ್ಕೆ ದೂರವಾದ ವಿಚಾರ ಎಂದು ನಾನು ಮಂತ್ರಿಗಳ ಗಮನಕ್ಕೆ ತರುತ್ತೇನೆ ಅಸಿಸ್ಟೆಂಟ್ ಸರ್ಜನ್‌ಗಳು ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಫ್ಯಾಮಿಲಿ ಪ್ಲಾನಿಂಗ್ ಪ್ರೋಗ್ರಾಮ್ ಅನ್ನು ಕಳೆದ ಒಂದೂವರೆ ವರ್ಷಗಳಿಂದ ಎಲ್ಲೂ ಸಹ ಮಾಡುತ್ತಿಲ್ಲ. ಆಲ್ ಇಂಡಿಯಾ ಆವರೇಜ್‌ಗೆ ನಮ್ಮ ರಾಜ್ಯವನ್ನು ಹೋಲಿಕೆ ಮಾಡಿಕೊಂಡಾಗ ಬಹಳ ಬಹಳ ಕಡಿಮೆಯಲ್ಲಿ ಕಳೆದ ವರ್ಷ ಸಹ ನಾವು ಇದ್ದೇವೆ. ಈ ವರ್ಷ ಏನೂ ಪ್ರಾರಂಭವಾಗಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಹಿಂದೆ ಜಾಯಿಂಟ್ ಡೈರೆಕ್ಟರ್ ಆಗಿದ್ದವರು, ಡೈರೆಕ್ಟರ್ ಆಗಿದ್ದವರು ಡಿಪ್ಟಿಕ್ ಹೆಲ್ತ್ ಆಫೀಸರ್ ಆಗಿದ್ದವರು ಹೋಗಿ ರಿವ್ಯೂ ಮಾಡುತ್ತಿದ್ದರು, ಕ್ಯಾಂಪ್‌ಗಳನ್ನು ನಡೆಸುತ್ತಿದ್ದರು. ಅದನ್ನು ಈಗ ಮಾಡುತ್ತಿಲ್ಲ. ಕಳೆದ ಒಂದು ವರ್ಷದಿಂದ ಯಾವ ಪ್ರಯತ್ನವೂ ನಡೆಯುತ್ತಿಲ್ಲ. ಸ್ಟಾಫ್‌ಂಡ್ ಸ್ಟಿಲ್ ಆಗಿದೆ. ಹೀಗಿದ್ದರೂ ಸಹಿತ, ರಾಂಗ್ ಇನ್‌ಫರ್ಮೇಶನ್ ಅನ್ನು ಈ ಪ್ರೋಗ್ರಾಮ್ ಬಗ್ಗೆ ಕೊಟ್ಟು, ೩ ಪರ್ಸೆಂಟ್ ಡಿವೆಶ ಆಗಿದೆ ೪ ಪರ್ಸೆಂಟ್ ಕಡಿಮೆಯಾಗಿದೆಯೆಂದು ಮಿಸ್‌ಗೈಡ್ ಮಾಡುವುದಕ್ಕೆ ಪ್ರಯತ್ನ ಮಾಡಿ ದ್ದಾರೆ. ತಾವು ದಯವಿಟ್ಟು ಡಿವಿಜನ್ ಮಟ್ಟದಲ್ಲಿ ಜಿಲ್ಲಾಮಟ್ಟದಲ್ಲಿ ರಿವ್ಯೂ ಮಾಡುವುದಕ್ಕೆ ಸಾಧ್ಯವೇ ಎಂದು ನಾನು ಕೇಳುವುದಕ್ಕೆ ಬಯಸುತ್ತೇನೆ. ಮಂತ್ರಿ ಈ ಅಸಿಸ್ಟೆಂಟ್ ಸರ್ಜನ್‌ಗಳು ಯಾರಿದ್ದಾರೆ, ಅವರು ಏತಕ್ಕೆ ಈ ಪ್ರೋಗ್ರಾಮ್ ಅನ್ನು ನಿಲ್ಲಿಸಿದ್ದಾರೆ? ಅವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲವೇ? ಕೇಂದ್ರ ಸರ್ಕಾರದವರು ನಿಮಗೆ ಏನಾದರೂ ಇನ್‌ಫ್ರಾಸ್ಟ್ರಕ್ಚರ್ ಅನ್ನು ಕೊಡಬೇಕೆಂದು ಡೈರೆಕ್ಷನ್ ಕೊಟ್ಟಿದ್ದಾರೆಯೆ? ಅದನ್ನು ಕಳೆದ ಒಂದು ವರ್ಷದಿಂದ ಕೊಡಲಿಕ್ಕೆ ಆಗಿಲ್ಲವೆಂದು ನಾನು ಕೇಳುವುದಕ್ಕೆ ಬಯಸುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಾನು ಹೊಸದಾಗಿ ಮಂತ್ರಿಯಾಗಿರುವುದು ನಿಜ. ಆದರೆ ನನಗೆ ಉತ್ತರ ಓದಿಸುವಾಗ ತಪ್ಪು ಮಾಹಿತಿ ಕೊಟ್ಟು ಅಧಿಕಾರಿಗಳು ಮಿಸ್‌ಗೈಡ್ ಮಾಡಿದ್ದಾರೆಂದು ಹೇಳುವುದನ್ನು ನಾನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಅಸಿಸ್ಟೆಂಟ್ ಸರ್ಜನ್‌ಗಳು ಬೆದರಿಕೆಯನ್ನೂ ಹಾಕಿ ಕೆಲವು ಬೇಡಿಕೆಗಳನ್ನು ಮುಂದಿಸಿ ನಾವು ಈ ಪ್ರೋಗ್ರಾಮ್ ಅನ್ನು ಮಾಡುವು ದಿಲ್ಲವೆಂದು ಹೇಳಿದ್ದರು. ಬೆದರಿಕೆಯನ್ನು ಹಾಕಿದ್ದು ವಿಕಕ್ಕೆಂದರೆ, ಅವರಿಗೆ ಅಸಿಸ್ಟೆಟೀಪ್ ಇಲ್ಲವಿದ್ದರೆ ನಾವು ಪ್ರೋಗ್ರಾಮ್ ಮಾಡುವುದಿಲ್ಲವೆಂದು ಹೇಳುತ್ತಿದ್ದರು. ಆ ರೀತಿ ಕೇಂದ್ರ ಸರ್ಕಾರದ ಗೈಡ್‌ಲೈನ್ಸ್ ಸಹ ಇತ್ತು. ತಮ್ಮ ಕಾಲದಿಂದಲೂ ಡಾಕ್ಟರುಗಳನ್ನು ರಿಕ್ರೂಟ್‌ಮೆಂಟ್ ಮಾಡಿ ಕೊಂಡಿಲ್ಲ. ಹೊಸದಾಗಿ ಡಾಕ್ಟರುಗಳನ್ನು ನಾನು ಎಲ್ಲಿಂದ ತರಲಿ? ಅನೆಸೆಥಿಯನ್ ಇಲ್ಲ, ಸರ್ಜನ್ಸ್ ಇಲ್ಲ. ಈಗ ನಾನೂರು ಐನೂರು ಡಾಕ್ಟರುಗಳು ಬೇಕು. ಅಸಿಸ್ಟೆಂಟ್ ಸರ್ಜನ್‌ಗಳ ಎರಡು ಮೂರು ಬೇಡಿಕೆಗಳು ಇವೆ. ಅದರ ಜೊತೆಗೆ ಟೈಮ್‌ಬೌಂಡ್ ಪ್ರಮೋಷನ್ ಕೇಳಿದ್ದರು. ಕೇಂದ್ರದಲ್ಲಿ ಅದನ್ನು ಪರಿಶೀಲನೆ ಮಾಡುತ್ತಿದ್ದಾರೆ. ಕುಟುಂಬ ಕಲ್ಯಾಣ ಚಿಕಿತ್ಸೆಗೆ ಬೇಕಾದ ಸೌಲಭ್ಯಗಳನ್ನು ಒದಗಿಸಬೇಕೆಂದು ಕೇಳಿದ್ದರು. ಅದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ. ಡಾಕ್ಟರುಗಳು ಇನ್ಶೂರೆನ್ಸ್ ಮಾಡಬೇಕೆಂದು ಕೇಳಿದರು, ಅದೂ ಪರಿಶೀಲನೆಯಲ್ಲಿದೆ. ಇದೆಲ್ಲ ಆದಮೇಲೆ ಈಗ ಕೆಲಸ ಶುರುವಾಗಿದೆ. ಇನ್ನು ಮುಂದಕ್ಕೆ ಕೆಲಸವನ್ನು ಸರಿಯಾಗಿ ನಡೆಸಿಕೊಂಡು ಹೋಗುತ್ತೇವೆಂದು ತಮಗೆ ಭರವಸೆಯನ್ನು ಕೊಡುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಶ್ರೀಮತಿ ನಾಗರತ್ನಮ್ಮನವರಿಗೆ ಅನುಭವ ಕಡಿಮೆ ಎಂದು ನಾನು ಹೇಳಲಿಲ್ಲ. ನಿಮಗೆ ಯಾವರೀತಿ ಮಿಸ್‌ಗೈಡ್ ಮಾಡಿದ್ದಾರೆಂದರೆ, ನೀವು ಈ ಉತ್ತರವನ್ನು ನೋಡದೇ ಈ ಸದನದ ಮುಂದೆ ಇಟ್ಟಿದ್ದಿರಾ? ಬೇರಾರಾದರೂ ಅಂಡರ್‌ಸೆಕ್ರೆಟರಿ ಇದನ್ನು ಅಪ್ರೂವ್ ಮಾಡಿದ್ದಾರೆಯೇ? ಅಸಿಸ್ಟೆಂಟ್ ಸರ್ಜನ್‌ಗಳು ಸ್ಟ್ರೈಕ್ ಮಾಡಿದ್ದಾರೆ. ಅವರು ಡಿಮಾಂಡ್‌ಗಳನ್ನು ಇಟ್ಟಿದ್ದಾರೆ ಎಂದು ತಾವು ತಮ್ಮ ಉತ್ತರದಲ್ಲಿ ಎಲ್ಲೂ ಹೇಳಿಲ್ಲ. ಈ ಕಾರಣದಿಂದ ಈ ಕಾರ್ಯಕ್ರಮವನ್ನು ಜಾರಿಗೆ ತಂದಿಲ್ಲವೆಂದು ಹೇಳಿಲ್ಲ. ಈಗ ಪ್ರಾರಂಭ ಮಾಡಿದ್ದೇವೆಂದು ಪುನಃ ತಾವು ಹೇಳುತ್ತೀರಿ. ತಮಗೆ ಯಾರೋ ರಾಂಗ್ ಇನ್‌ಫರ್ಮೇಶನ್ ಕೊಟ್ಟಿದ್ದಾರೆ. ನಮ್ಮ ಕಾಲದಲ್ಲಿ ಅಸಿಸ್ಟೆಂಟ್ ಸರ್ಜನ್‌ಗಳನ್ನು ರಿಕ್ರೂಟ್‌ಮೆಂಟ್ ಮಾಡಲಿಲ್ಲವೆಂದು ಹೇಳಿದಿರಿ. ನಾವು ೧೫೦೦ ಜನ ಅಸಿಸ್ಟೆಂಟ್ ಸರ್ಜನ್‌ಗಳನ್ನು ಲೇಡಿ ಡಾಕ್ಟರುಗಳನ್ನು ರಿಕ್ರೂಟ್ ಮಾಡಿಕೊಂಡಿದ್ದೆವೆ. ಈ ದೇಶದಲ್ಲಿ ದಾರಿಗಾತ ಹೊಡೆದುಕೊಂಡು ಬರುತ್ತಿದ್ದೀರಿ, ಖಜಾನೆಯನ್ನು ನಾವೆಲ್ಲಾ ಬರಿದು ಮಾಡಿದ್ದೆವು ಈಗ ತುಂಬಿಸಿದ್ದೇವೆ

ಎಂದು ಹೇಳುತ್ತೀರಿ. ಈಗ ಒಂದು ವರ್ಷದಿಂದ ನಿಮ್ಮ ಸರ್ಕಾರ ಬಂದಮೇಲೆ ಏತಕ್ಕೆ ರಿಕ್ರೂಟ್ ಮಾಡಲಿಲ್ಲ? ಹಾಗಿದ್ದರೆ ಸ್ಪೆಷಲ್ ರಿಕ್ರೂಟ್‌ಮೆಂಟ್ ಮಾಡಿ. ತಾವು ಹೇಳುತ್ತೀರಿ ಅಂದರೆ ನಾನೂ ಸಹ ಹೇಳಬೇಕಾಗುತ್ತದೆ ನೀವು ಟೈಮ್‌ಬಾಂಡ್ ಪ್ರಮೋಷನ್ ಆದರೂ ಕೊಡಿ, ರಿಕ್ರೂಟ್‌ಮೆಂಟ್ ಆದರೂ ಮಾಡಿಕೊಳ್ಳಿ. ಆದರೆ ಫ್ಯಾಮಿಲಿ ಪ್ಲಾನಿಂಗ್ ಪ್ರೋಗ್ರಾಮ್ ಏನಿದೆ ಅದು ಸಫರ್ ಆಗುತ್ತಿದೆ ಇದಂ ಏಕೆ ಎನ್ನುವುದನ್ನು ನಿಮಗೆ ಹೇಳುತ್ತೇನೆ. ಮೇಲುಗಡೆ ಇರತಕ್ಕಂಥ ಜನ ಯಾರು ಇದ್ದಾರೆ, ಅವರು ಹೋಗಿ ರಿವ್ಯೂ ಮಾಡಬೇಕು. ಏಕೆ ಮಾಡಲಿಲ್ಲ ಎಂದು ಅವರಿಗೆ ಹೋಗಿ ಕೇಳಬೇಕು. ಟಾರ್ಗೆಟ್ ಫಿಕ್ಸ್ ಮಾಡಿದ್ದರೂ ನೀವು ಏಕೆ ರೀಚ್ ಆಗಲಿಲ್ಲ ಅಂತ ಅವರನ್ನು ಕೇಳಬೇಕು. ಆದರೆ ಆದನ್ನು ಒಂದು ವರ್ಷದಿಂದ ಯಾರೂ ಮಾಡುತ್ತಿಲ್ಲ. ಆದನ್ನು ಮಾಡುವುದಕ್ಕೆ ಸಾಧ್ಯವೇ ಎಂದೂ ನಾನು ನಿಮ್ಮನ್ನು ಕೇಳುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಾವೇನೂ ಡಂಗೂರ ಹೊಡೆಯುತ್ತಿಲ್ಲ. ಇನ್ನೂ ಐದೂನೂರು ಜನ ಡಾಕ್ಟರುಗಳು ಬೇಕು ಎಂದು ಹೇಳಿ ಪಿ.ಎಸ್.ಸಿ.ಯವರಿಗೆ ಕಳಿಸಿ ಕೊಟ್ಟಿದ್ದೇವೆ. They are taking their own sweet time. ಮೊನ್ನೆ ದಿವಸ ತಮಗೆ ಗೊತ್ತಿರುವ ಹಾಗೆ ನಾನು ಹೇಳಿದೆ, ಏನಾದರೂ ಆಪರು ಬೇಗ ಡಾಕ್ಟರುಗಳನ್ನು ರಿಕ್ರೂಟ್ ಮಾಡಿಕೊಡದೇ ಹೋದರೆ, ನಾನು ಕಾಂಟ್ರಾಕ್ಟ್ ಮೂಲಕ ಬೇರೆಯವರನ್ನು ತೆಗೆದುಕೊಂಡು ಅಲ್ಲಲ್ಲಿ ಪೋಸ್ಟ್ ಮಾಡುತ್ತೇನೆ ಎಂದು ಹೇಳಿದ್ದೇನೆ. ಮೊನ್ನೆ ದಿವಸ ಆವರು ನಮಗೆ ಇನ್ನು ಒಂದು ತಿಂಗಳೊಳಗೆ ಡಾಕ್ಟರ್‌ಗಳನ್ನು ಸೆಲೆಕ್ಟ್ ಮಾಡಿ ಕೊಡುತ್ತೇವೆ ಎಂದು ಹೇಳಿದ್ದಾರೆ ಮತ್ತು ಜಾಹೀರಾತನ್ನು ಕೊಟ್ಟಿದ್ದಾರೆ. ಆದ್ದರಿಂದ ಇದಕ್ಕೆ ಡಂಗೂರ ಹೊಡೆಸಬೇಕಾದ ಆವಶ್ಯಕತೆ ಇಲ್ಲ. This is a necessity and this family planning programme is a national programme. ಇದಂ ನನಗೆ ಗೊತ್ತಿದೆ. ಆದ್ದರಿಂದ ಇನ್ನು ಮುಂದೆ ತಾವು ಹೇಳಿದ್ದನ್ನೆಲ್ಲಾ ನಾನು ನಿಗಾದಲ್ಲಿಟ್ಟು ಕೊಂಡು ಸರಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀಮತಿ ದಮಯಂತಿ ಬೋರೇಗೌಡ.—ಅಸಿಸ್ಟೆಂಟ್ ಸರ್ಜನ್‌ಗಳ ಒಂದು ನ್ಯಾಯಬದ್ಧವಾದ ಬೇಡಿಕೆಗಳನ್ನು ಈಡೇರಿಸುವುದರಲ್ಲಿ ಸರ್ಕಾರಕ್ಕೆ ಏನು ತೊಂದರೆ ಇದೆ? ೨೦ ವರ್ಷಗಳಾದರೂ ಆವರಿಗೆ ಏನೊಂದೂ ಪ್ರಮೋಷನ್ ಇಲ್ಲ, ಮತ್ತೊಂದಿಲ್ಲ. ಆದ್ದರಿಂದ ಅವರು ಸ್ವಲ್ಪ ದಿವಸ ಫ್ಯಾಮಿಲಿ ಪ್ಲಾನಿಂಗ್ ಪ್ರೋಗ್ರಾಮ್‌ನಲ್ಲಿ ಇನ್‌ವಾಲ್ವ್ ಆಗುವುದಿಲ್ಲ ಎಂದು ಹೇಳಿ ಅದನ್ನು ನಿಲ್ಲಿಸಿದ್ದು ನಿಜ.

ಶ್ರೀ ಕೆ. ಎಸ್. ನಾಗರತ್ನಮ್ಮ.—ತಾವು ಕೇಳಿದ್ದನ್ನು ನಾನು ಅರ್ಥ ಮಾಡಿಕೊಳ್ಳಲಿಲ್ಲ. ಮತ್ತೊಮ್ಮೆ ಕೇಳಿ.

ಶ್ರೀಮತಿ ದಮಯಂತಿ ಬೋರೇಗೌಡ.—ಅಸಿಸ್ಟೆಂಟ್ ಸರ್ಜನ್ಸ್, ಅವರ ಕೆಲವು ನ್ಯಾಯಬದ್ಧವಾದ ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟಿದ್ದಾರೆ. ಸುಮಾರು ವರ್ಷಗಳಿಂದ ಅವರು ತಮ್ಮ ಜೊತೆಯಲ್ಲಿ, ಇದರ ಬಗ್ಗೆ ವ್ಯವಹರಿಸುತ್ತಿದ್ದಾರೆ. ಈ ನ್ಯಾಯಬದ್ಧವಾದ ಬೇಡಿಕೆಗಳು, ಪ್ರಮೋಶನ್ ಕೊಡುವುದಾಗಲೀ, ಮತ್ತೊಂದಾಗಲೀ ಇದ್ದರೆ, ಅದನ್ನು ಒದಗಿಸಿ ಕೊಡುವುದರಲ್ಲಿ ಸರ್ಕಾರಕ್ಕೆ ಏನಂ ತೊಂದರೆ ಇದೆ ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ತಮಗೆ ಗೊತ್ತಿರುವ ಹಾಗೆ ಹಣಕಾಸಿನ ತೊಂದರೆಯೇ ಇದ್ದದ್ದು.

ಪ್ರಶ್ನೆ.—೪೩(೧೫೫) ಮಾನ್ಯ ಸದಸ್ಯರಾದ ಶ್ರೀ ಸಿ. ಬೈರೇಗೌಡ ಆವರು ಗೈರುಹಾಜರು)

ಬೈಂದೂರು ಕ್ಷೇತ್ರದಲ್ಲಿ ಆಸ್ಪತ್ರೆಗಳಿಗೆ ವೈದ್ಯರ ನೇಮಕ

೨೨೩. ಶ್ರೀ ಜಿ.ಎಸ್. ಆಚಾರ್ (ಬೈಂದೂರು).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವೆಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರು ಕ್ಷೇತ್ರವ ಕೊಲ್ಲೂರು, ಹಳ್ಳಿಹೊಳೆ, ಹಕ್ಲಾಡಿ ಆಸ್ಪತ್ರೆಗಳಲ್ಲಿ ವೈದ್ಯಾಧಿಕಾರಿಗಳು ಬಹುಕಾಲದಿಂದ ಇಲ್ಲದಿರುವುದು ಬೈಂದೂರಿನಲ್ಲಿ ಮಹಿಳಾ ವೈದ್ಯರು ಇಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಾದರೆ ಖಾಲಿ ಇರುವ ಸ್ಥಾನ ಭರ್ತಿ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಇ) ಆಸ್ಪತ್ರೆಗಳಲ್ಲಿ ವೈದ್ಯರ ಖಾಲಿಯಾದ ಸ್ಥಾನ ತುಂಬಲು ಸೂಕ್ತ ಕ್ರಮ ಕೈಗೊಳ್ಳಲಾಗುವುದೇ?